


# ಎಲ್ಲೆಲ್ಲೂ ಚಿತ್ತಾರವೇ...

**ಜನಸಾಮಾನ್ಯರಿಗೆ ಕಲೆಯನ್ನು ಸಮೀಪವಾಗಿಸುವ ಚಿತ್ರಸಂತೆ (ಜ. 8) ಮತ್ತೆ ಬಂದಿದೆ. ಕಲಾಕೃತಿಗಳನ್ನು ಕಣ್ತುಂಬಿಕೊಳ್ಳಲು ಹಾಗೂ ಕಲಾವಿದರೊಂದಿಗೆ ಒಡನಾಡಲು ಈ ಸಂತೆಯೊಂದು ಅವಕಾಶ.**

**■ ಜಗನ್ನಾಥ ಪ್ರಕಾಶ್ ಎನ್.**



ಸಂತೆಯ ಪರಿಕಲ್ಪನೆ ನಮ್ಮ ನೆಲದಲ್ಲಿ ಬಹು ಹಿಂದಿನದು. ಈಗ ಮಾಲ್‌ಗಳ ಕಾಲ. ಮಾಯಾಬಜಾರ್‌ಗಳಂಥ ಮಾಲ್‌ಗಳ ಅಬ್ಬರದಲ್ಲೂ ಸಂತೆಗಳು ಪೂರ್ತಿ ಕಳೆದುಹೋಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಸಂತೆ ಇಂದಿಗೂ ಜನರ ಜೀವನಾಡಿ.

ಸಾಮಾನ್ಯವಾಗಿ ಸಂತೆ ನಡೆಯುವುದು ವಾರಕ್ಕೊಮ್ಮೆ. ಆದರೆ, ಐವತ್ತಕ್ಕೂ ಹೆಚ್ಚು ಮಾಲ್‌ಗಳಿರುವ ಬೆಂಗಳೂರು ಮಹಾನಗರದಲ್ಲಿ ವರ್ಷಕ್ಕೊಂದು ಸಂತೆ ನಡೆಯುತ್ತದೆ. ಅದುವೇ ‘ಚಿತ್ರಸಂತೆ’. ಕಲಾಕೃತಿಗಳ ಈ ಸಂತೆಯ ಜನಪ್ರಿಯತೆ ಈಗ ದೇಶದೆಲ್ಲೆಡೆ ಹಬ್ಬಿದೆ.

ಸಾಂಪ್ರದಾಯಿಕ, ಜಾನಪದ, ಆಧುನಿಕ, ಸಮಕಾಲೀನ – ಹೀಗೆ, ಎಲ್ಲ ಪ್ರಕಾರಗಳ ಕಲಾಕೃತಿಗಳು ಕಾಣಸಿಗುವ ಚಿತ್ರಸಂತೆ ಬೆರಗು ಮೂಡಿಸುವ ಬಣ್ಣದಲೋಕ. ‘ಕರ್ನಾಟಕ ಚಿತ್ರಕಲಾ ಪರಿಷತ್ತು’ ಏರ್ಪಡಿಸುತ್ತಾ ಬಂದಿರುವ ಚಿತ್ರಸಂತೆಗೀಗ 20 ವರ್ಷ.

ಮೈಸೂರು ಶೈಲಿ, ಮಧುಬನಿ, ವರ್ಲಿ, ತಂಜಾವೂರು, ರಾಜಸ್ಥಾನಿ, ಕಾಂಗ್ರಾ ಶೈಲಿಗಳ ಕಲಾಕೃತಿಗಳೊಂದಿಗೆ, ಕೊಲಾಜ್, ಲಿಥೊಗ್ರಾಫ್, ಎಂಬೋಜಿಂಗ್, ಜಲವರ್ಣ, ತೈಲವರ್ಣ,